2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **60/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಹೆಚ್ ಎಸ್ ರುದ್ರಪ್ಪ | ಪಿಡಬ್ಲೂ - 21 |
| ತಂದೆಯ ಹೆಸರು | - | ಸಿದ್ದಪ್ಪ | ಸಿಡಬ್ಲೂ - 31 |
| ವಯಸ್ಸು | - | 63 ವರ್ಷ | |
| ಉದ್ಯೋಗ | - | ನಿವೃತ್ತ ಎ ಎಸ್ ಐ | |
| ವಾಸ ಸ್ಥಳ | - | ಕಲ್ಯಾಣ ನಗರ, ಚಿಕ್ಕಮಗಳೂರು | |

ದಿನಾಂಕಃ 15.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2015 ರಿಂದ 2020 ರವರೆಗೆ ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 24.12.2018 ರಂದು ನಾನು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿ ಇದ್ದ ಸಮಯದಲ್ಲಿ ಸಂಜೆ 4.30 ಗಂಟೆಗೆ ಈ ಪ್ರಕರಣದ ಪಿರ್ಯಾದಿ ನಂಜಪ್ಪ ಬಿನ್ ಮುಳ್ಳಪ್ಪ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆಃ **200/2018** ರಲ್ಲಿ ಐಪಿಸಿ ಕಲಂ **302** ಮತ್ತು ಕಲಂ **3** ಮತ್ತು **25** Arms Act ರೀತಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು

ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1 (ಬಿ) ಎಂದು ಗುರುತಿಸಲಾಯಿತು. ನಾನು ದಾಖಲು ಮಾಡಿದ್ದ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.36 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.36(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.33 ರವರಿಗೆ ನೀಡಿರುತ್ತೇನೆ.

ಪಾಟೀ ಸವಾಲುಃ ಶ್ರೀ ಕೆ ಎಸ್ ಎಸ್ ಪಿ ವಕೀಲರಿಂದ – ಆರೋಪಿ ಪರವಾಗಿ

3. ಚಾಸಾ.33 ರವರಿಗೆ ನಾನು ಕಡತವನ್ನು ಕೊಟ್ಟಾಗ ಸಮಯ ಸಂಜೆ 5.00 ಗಂಟೆಯಾಗಿತ್ತು. ಅದೇ ಸಮಯಕ್ಕೆ ನಾನು ಚಾಸಾ.24 ರವರ ಮುಖಾಂತರ ಪ್ರಥಮ ವರ್ತಮಾನ ವರದಿಯನ್ನು ನಾನು ನ್ಯಾಯಾಲಯಕ್ಕೆ ರವಾನಿಸಿರುತ್ತೇನೆ. ಪ್ರಕರಣ ದಾಖಲಾದ ಸಮಯದಲ್ಲಿ ಚಾಸಾ.33 ರವರು ಕಡೂರಿನಲ್ಲಿದ್ದರು. ನಾನು ಅವರಿಗೆ ಕಡತವನ್ನು ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಕೊಟ್ಟಿದ್ದೇನೆ. ನಿಪಿ.1 ದುೂರನ್ನು ಚಾಸಾ.1 ರವರು ಠಾಣೆಯಲ್ಲಿಯೇ ಬರೆದುಕೊಟ್ಟರು. ನಿಪಿ.1 ರಲ್ಲಿರುವ ಬರವಣಿಗೆಗೂ ಮತ್ತು ಅದರಲ್ಲಿರುವ ಚಾಸಾ.1 ರವರ ಸಹಿಗೂ ವ್ಯತ್ಯಾಸವಿದೆ ಎಂದರೆ ನನಗೆ ಗೊತ್ತಾಗುವುದಿಲ್ಲ.

4. ನೀವು ಹೇಳಿದಂತೆ ಪಿರ್ಯಾದಿ ಠಾಣೆಗೆ ಹಾಜರಾಗಿ ಯಾವುದೇ ದೂರನ್ನು ನೀಡದೇ ಇದ್ದರೂ ಸಹ ನಿಪಿ.1 ರಂತೆ ದೂರನ್ನು ನೀವು ಠಾಣೆಯಲ್ಲಿ ಸೃಷ್ಟಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಚಾಸಾ.1 ರವರ ಊರಿನಲ್ಲಿ ಅವರ ಸಹಿಯನ್ನು ಪಡೆದು ಠಾಣೆಯಲ್ಲಿ ದೂರನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡು, ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ